**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾಗಿರುವ ಮುಖ್ಯ ಇಂಜಿನಿಯರ್‌ರವರ ಕೇಂದ್ರ ಕಛೇರಿ, ವೃತ್ತ ಕಛೇರಿಗಳು, ವಿಭಾಗ ಕಛೇರಿಗಳು ಮತ್ತು ಉಪ-ವಿಭಾಗ ಕಛೇರಿಗಳಲ್ಲಿ ಖರೀದಿಸಲಾಗಿರುವ ಪೀಠೋಪಕರಣಗಳಲ್ಲಿನ ಅವ್ಯವಹಾರದ ಬಗ್ಗೆ ತನಿಖೆ ಕೈಗೊಳ್ಳುವ ಕುರಿತು

ಓದಲಾಗಿದೆ:
1. ಸರ್ಕಾರದ ಆದೇಶ ಸಂ:ಗ್ರಾಅಪ 56 ಗ್ರಾನೀಸ(2)2013 ದಿನಾಂಕ:04.03.2014.
2. ಸರ್ಕಾರದ ಆದೇಶ ಸಂ:ಗ್ರಾಅಪ 19 ಗ್ರಾನೀಸ(2)2015 ದಿನಾಂಕ:06.03.2015.
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಟಿಪ್ಪಣಿ ಸಂ:ಗ್ರಾಪಂರಾಸ/565/2016-17 ದಿನಾಂಕ:04.06.2016.

---

**ಪೀಠಿಕೆ:**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸೃಜಿಸಲಾಗಿದೆ. ಈ ರೀತಿ ಇಲಾಖೆಯನ್ನು ಸೃಜಿಸಿದ ನಂತರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಇಂಜಿನಿಯರ್‌ರವರ ಕೇಂದ್ರ ಕಛೇರಿ, ವೃತ್ತ ಕಛೇರಿಗಳು, ವಿಭಾಗ ಕಛೇರಿಗಳು ಮತ್ತು ಉಪ-ವಿಭಾಗ ಕಛೇರಿಗಳಲ್ಲಿ NRDWP – Support Activity ಘಟಕದಡಿ ಪೀಠೋಪಕರಣಗಳನ್ನು ಖರೀದಿಸುವ ಸಂಬಂಧ ಮೇಲೆ(2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮತಿಸಲಾಗಿದೆ.

ಸದರಿ ಪೀಠೋಪಕರಣಗಳ ಖರೀದಿಯಲ್ಲಿ ಎಸಗಿರುವ ಅಕ್ರಮ / ಅವ್ಯವಹಾರಗಳ ಕುರಿತಂತೆ ತನಿಖೆಯನ್ನು ನಡೆಸಲು ಮೇಲೆ(3)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಆದೇಶಿಸಿರುತ್ತಾರೆ. ಅದರಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾಗಿರುವ ಮುಖ್ಯ ಇಂಜಿನಿಯರ್‌ರವರ ಕೇಂದ್ರ ಕಛೇರಿ, ವೃತ್ತ ಕಛೇರಿಗಳು, ವಿಭಾಗ ಕಛೇರಿಗಳು ಮತ್ತು ಉಪ-ವಿಭಾಗ ಕಛೇರಿಗಳಲ್ಲಿ ಖರೀದಿಸಲಾಗಿರುವ / ಸಂಗ್ರಹಿಸಲಾಗಿರುವ ಪೀಠೋಪಕರಣಗಳಲ್ಲಿನ ಅವ್ಯವಹಾರದ ಕುರಿತು ತನಿಖೆ ನಡೆಸಲು ಸರ್ಕಾರ ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 83 ಗ್ರಾನೀಸ(2)2016 ಬೆಂಗಳೂರು, ದಿನಾಂಕ: 06.07.2016**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾಗಿರುವ ಮುಖ್ಯ ಇಂಜಿನಿಯರ್‌ರವರ ಕೇಂದ್ರ ಕಛೇರಿ, ವೃತ್ತ ಕಛೇರಿಗಳು, ವಿಭಾಗ ಕಛೇರಿಗಳು ಮತ್ತು ಉಪ-ವಿಭಾಗ ಕಛೇರಿಗಳಲ್ಲಿ ಖರೀದಿಸಲಾಗಿರುವ / ಸಂಗ್ರಹಿಸಲಾಗಿರುವ ಪೀಠೋಪಕರಣಗಳಲ್ಲಿನ ಅವ್ಯವಹಾರದ ಕುರಿತು ತನಿಖೆ ನಡೆಸಲು **ಶ್ರೀ ಎಸ್.ಎಸ್. ಕಣಗಾವಿ, ನಿವೃತ್ತ ಮುಖ್ಯ ಅಭಿಯಂತರರು,** ಲೋಕೋಪಯೋಗಿ ಇಲಾಖೆರವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ತನಿಖಾಧಿಕಾರಿಗಳು ಮೇಲ್ಕಂಡ ಪೀಠೋಪಕರಣಗಳಲ್ಲಿನ ಅವ್ಯವಹಾರದ ಕುರಿತು ತನಿಖೆ ನಡೆಸಿ ತಮ್ಮ ಸ್ಪಷ್ಟವಾದ ನಿರ್ಧಾರಿತ ಅಭಿಪ್ರಾಯದೊಂದಿಗೆ ತನಿಖಾ ವರದಿಯನ್ನು ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸಲು ನಿರ್ದೇಶಿಸಿದೆ.

ಪ್ರಕರಣದ ಕುರಿತು ಸಮಗ್ರ ತನಿಖೆ ನಡೆಸಲು ಅಧೀಕ್ಷಕ ಅಭಿಯಂತರರು, ಮುಖ್ಯ ಇಂಜಿನಿಯರ್‌ರವರ ಕೇಂದ್ರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರುರವರನ್ನು ಸಹಾಯಕ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಸಹಾಯಕ ಅಧಿಕಾರಿಯವರು ತನಿಖೆಗೆ ಅವಶ್ಯವಿರುವ ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಒದಗಿಸತಕ್ಕದ್ದು. ತನಿಖೆಗೆ ಅವಶ್ಯವಿರುವ ಸ್ಥಳಾವಕಾಶ, ಲೇಖನ ಸಾಮಗ್ರಿ ಮತ್ತು ಸಿಬ್ಬಂದಿಯನ್ನು ಒದಗಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರಿಗೆ ಸೂಚಿಸಲಾಗಿದೆ.

ತನಿಖಾಧಿಕಾರಿಯವರಿಗೆ ಸಂಭಾವನೆಯನ್ನು ಪ್ರತ್ಯೇಕವಾಗಿ ಮಂಜೂರು ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಗಳು:**

1. ಶ್ರೀ ಎಸ್.ಎಸ್. ಕಣಗಾವಿ, ನಿವೃತ್ತ ಮುಖ್ಯ ಅಭಿಯಂತರರು, ಪ್ಲಾಟ್ ನಂ.2825, ಸೆಕ್ಟರ್ 12, ಲವಡೆಲ್ ಶಾಲೆ ಎದುರು, ಮಹಂತೇಶ ನಗರ, ಬೆಳಗಾವಿ-590016.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು
3. ಅಧೀಕ್ಷಕ ಅಭಿಯಂತರರು, ಮುಖ್ಯ ಇಂಜಿನಿಯರ್‌ರವರ ಕೇಂದ್ರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
4. ಮುಖ್ಯ ಲೆಕ್ಕಾಧಿಕಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರರವರ ಆಪ್ತಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿಗಳು.
7. ಆಯುಕ್ತರು, ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
8. ಸರ್ಕಾರದ ಜಂಟಿ ಕಾರ್ಯದರ್ಶಿ(ಆಡಳಿತ-1) / (ಆಡಳಿತ-2) ಗ್ರಾ.ಅಪಂರಾಜ್ ಇಲಾಖೆರವರ ಆಪ್ತ ಸಹಾಯಕರು
9. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
10. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ ಕರ್ನಾಟಕ ವಿಕಾಸ ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
11. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
12. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
13. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.